ಭಾರತಿಯ ವಸ್ತ್ರ ಪರಂಪರೆಗೆ ಅದರಲ್ಲೂ ರೇಷ್ಮೆ ವಸ್ತ್ರಗಳಿಗೆ ತನ್ನದೆ ಆದ ಭವ್ಯ ಇತಿಹಾಸವಿದೆ. ದೇಶದಾದ್ಯಂತ ಹರಡಿಕೊಂಡಿರುವ ಸುಪ್ರಸಿದ್ಧ ನೇಯ್ಗೆ ಕೇಂದ್ರಗಳು ಈ ಭವ್ಯ ಪರಂಪರೆಯನ್ನು ತಮ್ಮ ಉತ್ಕೃಷ್ಟ ಉತ್ಪಾದನೆಗಳ ಮೂಲಕ ಪ್ರತಿಬಿಂಬಿಸುತ್ತವೆ.

ಬನಾರಸ್‌ನ ಬ್ರೊಕೇಡ್‌ಗಳು, ತಮಿಳುನಾಡಿನ ಕಾಂಜೀವರಮ್, ಆಂಧ್ರದ ಧರ್ಮಾವರಂ ಹಾಗೂ ಪೋಚಂಪಲ್ಲಿ ಸೀರೆಗಳು, ಒರಿಸ್ಸಾದ ಇಕತ್‌ಗಳು, ಗುಜರಾತ್‌ನ ಪಟೋಲಗಳು, ಪ.ಬಂಗಾಲದ ವಿಷ್ಣುಪುರ, ಮಧ್ಯಪ್ರದೇಶದ ಚಂದೇರಿ, ಅಸ್ಸಾಮ್‌ನ ಸುವಾಲ್ಕುಚ್ಚಿ,, ಕರ್ನಾಟಕದ ಮೈಸೂರು ರೇಷ್ಮೆ, ಇಳಕಲ್, ಮೊಳಕಾಲ್ಮೂರು ಸೀರೆಗಳು ಇಂತಹ ಕೆಲ ಉದಾಹರಣೆಗಳಷ್ಟೆ ! ವಿಶೇಷವೆಂದರೆ ಎಲ್ಲಾ ನೇಯ್ಗೆ ಕೇಂದ್ರಗಳು ಮೂಲತಃ ಕೈಮಗ್ಗ ಉತ್ಪನ್ನಗಳಿಗೆ ಹೆಸರುವಾಸಿಯಾಗಿದ್ದರೂ ಪ್ರತಿಯೊಂದು ಉತ್ಪನ್ನವೂ ತನ್ನದೇ ಆದ ವಿಶಿಷ್ಟ ವಿನ್ಯಾಸಗಳು, ವರ್ಣಗಳು, ವರ್ಣ ಸಂಯೋಜನೆ, ಹಾಗು ನೇಯ್ಗೆ ಪ್ರಕಾರಗಳಿಗೆ ಪ್ರಸಿದ್ಧಿಯಾಗಿದ್ದು ತಮ್ಮತನವನ್ನು ಕಾಯ್ದುಕೊಂಡಿವೆ. ವಿಶಿಷ್ಠ ಬಣ್ಣ, ಆಕರ್ಷಕ ನೇಯ್ಗೆ ಹಾಗೂ ಹೊಳಪುಗಳಿಂದ ಪ್ರಖ್ಯಾತವಾಗಿರುವ ಗುಳೇದಗುಡ್ಡದ ಖಣಗಳೂ (ರವಿಕೆ ಬಟ್ಟೆ) ಸಹ ಈ ಪಟ್ಟಿಗೆ ಸೇರುತ್ತವೆ.

ಗುಳೇದಗುಡ್ಡ ಎಂದೊಡನೇ, ತಟ್ಟನೆ ನೆನಪಾಗುವುದು ಅಲ್ಲಿಯ ಪ್ರಸಿದ್ಧ ಖಣಗಳು ಹಾಗೂ ಪ್ರಖ್ಯಾತ ಸಿಹಿ ತಿಂಡಿ ರಬಡಿ ಜಿಲೇಬಿ! ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಈ ಪುಟ್ಟ ಪಟ್ಟಣದಲ್ಲಿ ತಯಾರಿಸಲ್ಪಡುವ ರೇಷ್ಮೆ /ಹತ್ತಿ / ಪಾಲಿಯಸ್ಟರ್ ಖಣ ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ತುಂಬ ಜನಪ್ರಿಯ. ಇಳಕಲ್ ಸೀರೆ ಹಾಗೂ ಗುಳೇದಗುಡ್ಡದ ಖಣಗಳದ್ದು ಒಂದು ಅಮೋಘ ಜುಗಲ್ಬಂದಿ!

ಕಣ್ಣಿಗೆ ತಂಪೆನಿಸುವ ಮಿನುಗುವ ಛಾಯೆ ಹೊಂದಿರುವ ಈ ಖಣಗಳು ಹಸಿರು, ನೀಲಿ, ಕೆಂಪು, ಗುಲಾಬಿ, ನೇರಳೆ, ಕಂದು ಇತ್ಯಾದಿ ವರ್ಣಗಳಲ್ಲಿ ಲಭ್ಯ. ಈ ಯಾಂತ್ರಿಕ ಯುಗದಲ್ಲೂ ನವನಾಗರಿಕ ಫ್ಯಾಷನ್ ಜಗತ್ತಿನೊಡನೆ ತೀವ್ರ ಪೈಪೋಟಿಯನ್ನು ಎದುರಿಸುತ್ತ ಸಾಂಪ್ರದಾಯಿಕ ಚೆಲುವಿನಿಂದ ತನ್ನದೇ ಆದ ಬಹು ದೊಡ್ಡ ಗ್ರಾಹಕರ ಬಳಗವನ್ನು ಹೊಂದಿರುವ ಈ ಖಣಗಳಿಗೀಗ ವಿದೇಶಗಳಲ್ಲೂ ಬೇಡಿಕೆ. ತಲೆ ತಲಾಂತರಗಳಿಂದ ಖಣಗಳನ್ನು ನೇಯ್ದು ತಮ್ಮ ಬದುಕನ್ನು ರೂಪಿಸಿಕೊಂಡ ನೂರಾರು ಕುಟುಂಬಗಳು ಇಲ್ಲಿವೆ. ಗುಳೇದಗುಡ್ಡದಲ್ಲಿ ಸಾಮಾನ್ಯವಾಗಿ ಕೈಮಗ್ಗಗಳಲ್ಲಿ ರೇಷ್ಮೆಯ ಹಾಸು ಹಾಗೂ ಹತ್ತಿಯ ಹೊಕ್ಕನ್ನು ಬಳಸಿ ಖಣದ ಬಟ್ಟೆಯನ್ನು ನೇಯಲಾಗುತ್ತದೆ. ಖಣ 31 ಅಗಲ ಹಾಗೂ 19.68 ಉದ್ದವಿದ್ದು ಒಬ್ಬ ನೇಕಾರ 8 ಗಂಟೆಗಳಲ್ಲಿ 34 ಮೀಟರ್ ಬಟ್ಟೆಯನ್ನು ನೇಯಬಲ್ಲ. ರೇಷ್ಮೆ, ರೇಷ್ಮೆ ಹಾಗೂ ಹತ್ತಿ, ಮತ್ತು ಪಾಲಿಯಸ್ಟರ್ ಖಣಗಳನ್ನು ಇಲ್ಲಿ ನೇಯಲಾಗುತ್ತಿದ್ದು ರೇಷ್ಮೆ ಖಣಗಳ ನೇಕಾರರಿಗೆ ಬರುವ ಲಾಭ ಹೆಚ್ಚು. ಅಂತೆಯೇ ಕೈಮಗ್ಗಗಳಲ್ಲಿ ನೇಯ್ದ ರೇಷ್ಮೆ ಹಾಗೂ ರೇಷ್ಮೆ ಮಿಶ್ರಿತ ಖಣಗಳಿಗೆ ಹೆಚ್ಚಿನ ಬೇಡಿಕೆ ಕೂಡ. ಈ ಖಣಗಳಲ್ಲಿ ಬಳಸುವ ಜನಪ್ರಿಯ ವಿನ್ಯಾಸಗಳೆಂದರೆ, ಚಂಡು ಹೂವು, ತೇರು, ರುದ್ರಾಕ್ಷಿ, ಆನೆ ಹೆಜ್ಜೆ, ಸೂಜಿಮಲ್ಲಿಗೆ, ಸೂರ್ಯಕಮಲ, ಸೂರ್ಯ ಮುಕುಟ, ನಯಾ ಪೈಸೆ ಬಿಲ್ಲೆ, ಸೇವಂತಿಗೆ, ಆನೆ ನವಿಲು, ಸಿದ್ಧೇಶ್ವರ ಹಾಗೂ ಕೇದಗಿ ಇತ್ಯಾದಿ.



ಕಲೆ, ನೆಲೆ ಸಂಸ್ಥೆಯ ಸಂಸ್ಥಾಪಕಿ ಜಾನ್ಹವಿ ಕುಲಕರ್ಣಿ ವಿವಿಧ ಉತ್ಪನ್ನಗಳೊಂದಿಗೆ..

ಇಂತಹ ಒಂದು ವಿಶಿಷ್ಠ ಹಾಗೂ ಶ್ರೇಷ್ಠ ಕಲಾಪ್ರಕಾರದ ಉಳಿವಿಗಾಗಿ ಹಾಗೂ ಈ ನೇಕಾರರ ಸಾಮಾಜಿಕ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನದ ಅಂಗವಾಗಿ ಧಾರವಾಡದ ರಾಯಾಪುರದಲ್ಲಿರುವ ಕೇಂದ್ರ ರೇಷ್ಮೆ ಮಂಡಳಿಯ ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಕೇಂದ್ರ ಈ ಉದ್ಯಮದ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಶ್ರಮ/ ಹಣ ಉಳಿಸುವ ಸ್ನೇಹಪರ ತಂತ್ರಜ್ಞಾನವನ್ನು ಒದಗಿಸಿ ಈ ಉದ್ಯಮವನ್ನು ಉಳಿಸಿ ಬೆಳೆಸುವುದೇ ಈ ಕೇಂದ್ರದ ಮುಖ್ಯ ಉದ್ದೇಶ. ಈ ಕೇಂದ್ರದ ಮುಖಾಂತರ ಕೈಮಗ್ಗ/ ಯಾಂತ್ರಿಕ ಮಗ್ಗಗಳ ನೇಕಾರರಿಗೆ, ಹುರಿ ಹಾಕುವವರಿಗೆ, ಬಣ್ಣ ಹಾಕುವವರಿಗೆ, ಬೇಕಾಗುವ ಸಲಕರಣೆಗಳನ್ನು ಹಾಗೂ ತಾಂತ್ರಿಕ ಸಲಹೆಗಳನ್ನು ಒದಗಿಸಲಾಗುತ್ತದೆ. ಈ ಕೇಂದ್ರದ ಹಿರಿಯ ವಿಜ್ಞಾನಿಗಳಾಗಿರುವ ಎಂ.ಆರ್. ಇಟಗಿ, ಎಸ್.ಎಮ್. ಹುಕ್ಕೇರಿ ಹಾಗೂ ಬಿ. ಸಿ. ಹೆರಕಲ್ ಇವರು ಹೇಳುವ ಹಾಗೆ ಈಗಾಗಲೆ ಇಲ್ಲಿಯ ಮಗ್ಗಗಳಿಗೆ ಬೇರಿಂಗ್ ಅಳವಡಿಸಿ ಮಗ್ಗ ತುಳಿಯುವುದನ್ನು ಸರಳಗೊಳಿಸಲಾಗಿದೆ; ತುಂಬ ಶ್ರಮವನ್ನು ಬಯಸುವ ಕಂಡಿ ಸುತ್ತುವ ಕೆಲಸವನ್ನು ಚಿಕ್ಕದೊಂದು ಮೋಟಾರ್ ಅಳವಡಿಸುವ ಮೂಲಕ ಸುಲಭಗೊಳಿಸಲಾಗಿದೆ; ಖಣಗಳು ಬಣ್ಣ ಬಿಡದಂತೆ ತಾಂತ್ರಿಕತೆಯನ್ನು ಬಳಸಿಕೊಳ್ಳಲಾಗಿದೆ; ಪೆಡಲ್ ಮಗ್ಗಗಳನ್ನು ಪರಿಚಯಿಸಲಾಗಿದೆ. ಇಲ್ಲಿಯ ನೇಕಾರರನ್ನು ಮಹಾರಾಷ್ಟ್ರದ ಪೈಠಣ್ ಮತ್ತು ಏವ್ಲಾ ನೇಯ್ಗೆ ಕೇಂದ್ರಗಳಿಗೆ ಪ್ರವಾಸ ಕರೆದುಕೊಂಡು ಹೋಗಿ ಅಲ್ಲಿಯ ಕಾರ್ಯ ವೈಖರಿಯನ್ನು ಪರಿಚಯಿಸಲಾಗಿದೆ; ಎಲ್ಲಕ್ಕೂ ಮುಖ್ಯವಾಗಿ ಮಹಿಳಾ ಸ್ನೇಹಿ ತಾಂತ್ರಿಕತೆಗಳನ್ನು ಇಲ್ಲಿ ಪರಿಚಯಿಸಲಾಗುತ್ತಿದೆ

ದಶಕಗಳ ಹಿಂದೆಯೇ ಇಲ್ಲಯ ಮಾಜಿ ಶಾಸಕರಾದ ಮಲ್ಲಿಕಾರ್ಜುನ ಬನ್ನಿಯವರು ಈ ಖಣಗಳ ಬಟ್ಟೆಯ ಶರ್ಟ್‌ಗಳನ್ನು ಧರಿಸುತ್ತಿದ್ದರಂತೆ! ಹೇಗಾದರೂ ಮಾಡಿ ಈ ಖಣಗಳನ್ನು ಜನಪ್ರಿಯಗೊಳಿಸುವುದು ಅವರ ಉದ್ದೇಶವಾಗಿತ್ತಂತೆ! ಆದರೆ ಅದೇಕೋ ಅಂದು ಅವು ಅಷ್ಟೊಂದು ಜನಪ್ರಿಯವಾಗಲಿಲ್ಲ! ಇದೇ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿರುವ ಭಾರತಿಯ ಕಲೆಗಳು ಹಾಗೂ ಇನ್ನಿತರ ಕಲಾ ಸಂಬಂಧಿ ಕೌಶಲ್ಯಗಳಿಗೆ ನೆಲೆ ಒದಗಿಸಿ, ಉಳಿಸಿ ಬೆಳೆಸುತ್ತಿರುವ ಕಲೆ, ನೆಲೆ ಸಂಸ್ಥೆಯ ಸಂಸ್ಥಾಪಕಿಯಾದ ಜಾನ್ಹವಿ ಕುಲಕರ್ಣಿ ಈ ಖಣಗಳಿಂದ ವಿವಿಧ ಉತ್ಪನ್ನಗಳನ್ನು ಅಂದರೆ ತೋರಣಗಳು, ಕೈಚೀಲಗಳು, ವ್ಯಾನಿಟಿ ಬ್ಯಾಗ್, ಪೀಠೋಪಕರಣಗಳ ಹೊದಿಕೆ, ಐಪ್ಯಾಡ್‌ಗಳ ಹೊದಿಕೆ ಇತ್ಯಾದಿಗಳನ್ನು ತಯಾರಿಸಿ ದೇಶ ವಿದೇಶಗಳಲ್ಲಿ ಪ್ರಖ್ಯಾತಗೊಳಿಸುತ್ತಿದ್ದಾರೆ. ಇತ್ತೀಚೆಗೆ ತಾನೇ ಗುಳೇದಗುಡ್ಡದ ಖಣದಿಂದ ಮಾಡಿದ ಇಂತಹ ಕೆಲ ಉತ್ಪನ್ನಗಳನ್ನು ಅಮೆರಿಕದ ಖ್ಯಾತ ಕಂಪನಿಯೊಂದಕ್ಕೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದಾರೆ. ಅವರ ಪ್ರಕಾರ ಇಂತಹ ಅಪರೂಪದ ಕಲಾಪ್ರಕಾರಗಳನ್ನು ನಮ್ಮದಾಗಿಸಿಕೊಂಡು, ಹೊಸ ಜೀವನ ಶೈಲಿಗೆ ಮಾರ್ಪಡಿಸಿ ಈ ಪ್ರಕಾರಗಳಿಗೆ ಮರು ಜೀವ ತುಂಬುವುದೇ ಕಲೆ ನೆಲೆಯ ಮುಖ್ಯ ಉದ್ದೇಶ.

'ಗುಳೇದಗುಡ್ಡದ ಖಣದ ಬಟ್ಟೆಯನ್ನು ನೇರವಾಗಿ ಅಲ್ಲಿಯ ನೇಕಾರರಿಂದಲೇ ಖರೀದಿಸಿ, ಅವುಗಳಿಗೆ ಹೊಸ ರೂಪ ಕೊಟ್ಟು ದೇಶ ವಿದೇಶಗಳ ಮಾರುಕಟ್ಟೆಯಲ್ಲಿ ಬೇಡಿಕೆ ಉಂಟು ಮಾಡುವ ಯೋಚನೆಯೂ ನಮಗಿದೆ. ಈ ಸೊಬಗಿನ ಖಣಗಳು ಸಾಂಪ್ರದಾಯಿಕ ಚೆಮುವಿನೊಡನೆ ಆಧುನಿಕತೆಯ ಮೆರುಗನ್ನೂ ಮೇಳೈಸಿಕೊಂಡಿವೆ'ಎನ್ನುತ್ತಾರೆ ಜಾನ್ಹವಿ.

ಸ್ವತಃ ಪ್ರಖ್ಯಾತ ನೇಕಾರರಾಗಿರುವ ಕೇಂದ್ರ ರೇಷ್ಮೆ ಮಂಡಳಿಯ ಅಧ್ಯಕ್ಷರಾದ ಕೆ.ಎಂ. ಹನುಮಂತರಾಯಪ್ಪನವರ ಪ್ರಕಾರ ಇಂತಹ ಅಪರೂಪದ ಗುಡಿಗಾರಿಕೆ, ಕುಶಲ ಕೈಗಾರಿಕೆಗಳು ಉಳಿದು ಬೆಳೆದಾಗಲೇ ಗ್ರಾಮೀಣ ಜನರು ಸ್ವಾವಲಂಬಿಗಳಾಗಿ ಗಾಂಧೀಜಿಯವರ ಗ್ರಾಮ ರಾಜ್ಯದ ಕಲ್ಪನೆ ಸಾಕಾರವಾಗುವುದು.